# ಚುಕ್ಕಿ ಚುಕ್ಕಿ ಅಭಿಮಾನ ಉಕ್ಕಿ



ಓರ್ವ ಕಲಾವಿದ ಮತ್ತೊಬ್ಬ ಕಲಾವಿದನ ಬಗ್ಗೆ ಹೊಂದಿರಬಹುದಾದ ವಿಶೇಷ ಅಭಿಮಾನಕ್ಕೆ ಉದಾಹರಣೆಯಾಗಿ ಮ್ಯಾದಾರ್ ಅವರ 'ರಾಜ್‌ಕುಮಾರ್ ಚುಕ್ಕಿ ಚಿತ್ರ'ಗಳನ್ನು ನೋಡಬಹುದು.

■ ಈರಣ್ಣ ಬೆಂಗಾಲಿ

ರಾಯಚೂರಿನ ಎಚ್.ಎಚ್. ಮ್ಯಾದಾರ್ ಅವರು ವರನಟ ರಾಜ್‌ಕುಮಾರ್ ಅವರ ಬಹುದೊಡ್ಡ ಅಭಿಮಾನಿ. ತಮ್ಮ ಅಭಿಮಾನದ ಅಭಿವ್ಯಕ್ತಿಗೆ ಮ್ಯಾದಾರ್ ಅವರು ಬಳಸಿಕೊಂಡಿರುವುದು ಚುಕ್ಕಿ ಚಿತ್ರಗಳ ಮಾಧ್ಯಮವನ್ನು. ರಾಜ್ ಅವರು ನಟಿಸಿರುವ ವಿವಿಧ ಚಲನಚಿತ್ರಗಳ ಸನ್ನಿವೇಶಗಳನ್ನು ಅವರು ಚುಕ್ಕಿ ಚಿತ್ರಗಳಾಗಿಸಿದ್ದಾರೆ. ಆ ಚಿತ್ರಗಳು ರಾಜ್ ವೈಭವದ ಜೊತೆಗೆ ಕನ್ನಡ ಚಿತ್ರರಂಗದ ಸಮೃದ್ಧ ಯುಗವೊಂದನ್ನು ಸಹೃದಯರಿಗೆ ನೆನಪಿಸುವಂತಿವೆ.

ಚುಕ್ಕಿ ಚಿತ್ರಗಳ ಮೂಲಕ ರಾಜ್ ಅವರನ್ನು ಚಿತ್ರಿಸಲು ಮ್ಯಾದಾರ್ ಅವರಿಗೆ ಸ್ಫೂರ್ತಿ ಬರಗೂರು ರಾಮಚಂದ್ರಪ್ಪ. ರಾಜ್ ಮೇಲಿನ ಅಭಿಮಾನವನ್ನು ಚುಕ್ಕಿ ಚಿತ್ರಗಳ ಮೂಲಕ ಅಭಿವ್ಯಕ್ತಿಸುವಂತೆ ಬರಗೂರರು ನೀಡಿದ ಸಲಹೆಯ ದಾರಿಯಲ್ಲಿ ಮ್ಯಾದಾರ್ ಬಹು ದೂರ ಕ್ರಮಿಸಿದ್ದಾರೆ.

ವಿಷ್ಣುವಿನ ದಶಾವತಾರದಂತೆ 'ಅಣ್ಣಾವ್ರ ಹನ್ನೊಂದು ಅವತಾರ' ಎಂಬ ಪರಿಕಲ್ಪನೆಯಲ್ಲಿ, ರಾಜ್ ಅವರ ವಿವಿಧ ಚಲನಚಿತ್ರಗಳ ಚುಕ್ಕಿಚಿತ್ರಗಳನ್ನೊಳಗೊಂಡ ಕ್ಯಾಲೆಂಡರ್ ತರುವುದು ಮ್ಯಾದಾರ್ ಅವರ ಕನಸಾಗಿತ್ತು. 'ನಾ ಕಂಡಂತೆ ಅಣ್ಣಾವ್ರು' ಎಂಬ ಶೀರ್ಷಿಕೆಯಡಿ ರಾಜ್ ಅಭಿಮಾನಿಗಳಿಂದ ಲೇಖನಗಳನ್ನು ತರಿಸಿಕೊಂಡು ಕೃತಿಯೊಂದನ್ನು ಹೊರತರುವ ಆಲೋಚನೆಯೂ ಅವರಿಗಿತ್ತು. ಆ ಚಿಂತನೆಗೆ ಬರಗೂರು ಬೇರೆಯದೇ ಸ್ವರೂಪ ನೀಡಿದರು. 'ರಾಜ್ ಕುರಿತಾಗಿ ಹಲವು ಕೃತಿಗಳು ಬಂದಿವೆ. ನೀವು ಅಣ್ಣಾವ್ರ ಚುಕ್ಕಿ ಚಿತ್ರಗಳನ್ನು ರಚಿಸಿ, ಆ ಕಲಾಕೃತಿಗಳೇ ಕೃತಿಯ ಮೂಲಕ ದಾಖಲಾಗಲಿ' ಎಂದು ಹೇಳಿದರು. ಈ ಮಾತಿನ ಹಿನ್ನೆಲೆಯಲ್ಲಿ 2018ರಿಂದ ರಾಜ್ ಚುಕ್ಕಿ ಚಿತ್ರಗಳನ್ನು ಬಿಡಿಸಲು ಆರಂಭಿಸಿದ ಮ್ಯಾದಾರ್, ಈವರೆಗೆ ನೂರಕ್ಕೂ ಹೆಚ್ಚು ಅಣ್ಣಾವ್ರ ಚುಕ್ಕಿ ಚಿತ್ರಗಳನ್ನು ರಚಿಸಿದ್ದಾರೆ. ಅಂದಹಾಗೆ, ಮ್ಯಾದಾರ್ ನಿವೃತ್ತ ಚಿತ್ರಕಲಾ ಶಿಕ್ಷಕರು.

'ಚುಕ್ಕಿ ಚಿತ್ರ ಬಿಡಿಸಲು ಬಹಳ ಸಮಯ ಬೇಕಾಗುತ್ತದೆ. ಕೆಲವೊಮ್ಮೆ ಒಂದು ಚುಕ್ಕಿ ಕಲಾಕೃತಿ







